ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ಧನಂಜಯ್ ಸರ್ಜಿ ಇವರು ನಿಯಮ - 330ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ:

ರಾಜ್ಯದಲ್ಲಿ ಇತ್ತೀಚೆಗೆ ಆತಂಕಕಾರಿಯಾಗಿ ಹೆಚ್ಚುತ್ತಿರುವ ಶಿಶು ಮರಣ ಪ್ರಮಾಣ, ಗರ್ಭಿಣಿ-ಬಾಣಾಂತಿಯರ ಸಂಖ್ಯೆ ಕಳೆದ 3 ವರ್ಷಗಳಲ್ಲಿ 18,000 ಕ್ಕೂ ಮಿಕ್ಕಿ ನವಜಾತ ಶಿಶುಗಳು ಮರಣ ಹೊಂದಿರುವುದು ಸೇರಿದಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ , ಆಧುನಿಕ ಚಿಕಿತ್ಸಾ ಸೌಲಭ್ಯಗಳ ಕೊರತೆ ಹಾಗೂ ಇತ್ತೀಚಿನ ದಿನಗಳಲ್ಲಿ ಒತ್ತಡದ ಜೀವನ ಶೈಲಿಯಿಂದಾಗಿ ಜನರ ಮಾನಸಿಕ ಆರೋಗ್ಯ ಕುಸಿದಿರುವುದರಿಂದ " ಟೆಲಿ ಮನಸ್ " ಹೆಲ್ಪ್ ಲೈನ್ ಅನ್ನು ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಸೇರಿದಂತೆ ಆರೋಗ್ಯ ಇಲಾಖೆಯಲ್ಲಿನ ಸಮಸ್ಯೆಗಳು ಹಾಗೂ ಕೈಗೊಳ್ಳಬೇಕಾಗಿರುವ ಸುಧಾರಣೆ ಕುರಿತು .

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-

- ನವಜಾತ ಶಿಶುಗಳ ಮರಣಗಳನ್ನು ತಡೆಯಲು ವೈದ್ಯಕೀಯ ಮಹಾವಿದ್ಯಾಲಯಗಳ ಆಸ್ಪತ್ರೆಗಳನ್ನೊಳಗೊಂಡಂತೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳಿಗೆ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿ ಶಿಶು ಮರಣಗಳ ಪ್ರಮಾಣವು ಕಡಿಮೆಯಾಗುತ್ತಿದ್ದು, ಮಾದರಿ ವ್ಯವಸ್ಥೆ 2023 (Sample Registration System-SRS) ರ ವರದಿಯನ್ವಯ ಕರ್ನಾಟಕ ರಾಜ್ಯದ ಸರಾಸರಿ ನವಜಾತ ಶಿಶು ಮರಣ ದರವು 11 (ಪ್ರತಿ 1000 ಜೀವಂತ ಜನನಗಳಿಗೆ) ಇದ್ದು, ಭಾರತ ದೇಶದ ದರವು 19 ಇರುತ್ತದೆ.
- ಕರ್ನಾಟಕ ರಾಜ್ಯವು ನವಜಾತ ಶಿಶು ಮರಣದ ಪ್ರಮಾಣ ತಗ್ಗಿಸುವಲ್ಲಿ ಮಹತ್ವದ ಸಾಧನೆ ಮಾಡಿದೆ. ರಾಷ್ಟ್ರೀಯ ಆರೋಗ್ಯ ನೀತಿ–2017ರಲ್ಲಿ 2025ರೊಳಗಾಗಿ ನವಜಾತ ಶಿಶು ಮರಣ ದರವನ್ನು ಪ್ರತಿ 1000 ಜೀವಂತ ಜನನಗಳಿಗೆ 16 ಕ್ಕಿಂತ ಕಡಿಮೆ ಮಾಡುವ ಗುರಿಯನ್ನು ರಾಜ್ಯವು 2020 ರಲ್ಲೇ (5 ವರ್ಷ ಮುಂಚಿತವಾಗಿ) ಸಾಧಿಸಿದೆ. ಇತ್ತೀಚಿನ ಮಾದರಿ ನೋಂದಣಿ ವ್ಯವಸ್ಥೆ (Sample Registration System – SRS) 2023ರ ವರದಿ ಪ್ರಕಾರ, ಕರ್ನಾಟಕದ ನವಜಾತ ಶಿಶು ಮರಣ ದರ ಪ್ರತಿ 1000 ಜೀವಂತ ಜನನಗಳಿಗೆ 11ಕ್ಕೆ ಇಳಿಕೆಯಾಗಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳು (Sustainable Development Goals – SDGs) 2030ರ ಹೊತ್ತಿಗೆ ನವಜಾತ ಶಿಶು ಮರಣ ದರವನ್ನು ಪ್ರತಿ 1000 ಜೀವಂತ ಜನನಗಳಿಗೆ 12 ಕ್ಕಿಂತ ಕಡಿಮೆ ಮಾಡಲು ನಿಗದಿಪಡಿಸಲಾಗಿದೆ. ಈ ಗುರಿಯನ್ನೂ ರಾಜ್ಯದಲ್ಲಿ ಈಗಾಗಲೇ ಸಾಧಿಸಿದೆ. ಇದೀಗ ಏಕ ಅಂಕಿಯ (single-digit) ನವಜಾತ ಶಿಶು ಮರಣ ದರ ಸಾಧನೆಯತ್ತ ರಾಜ್ಯ ಹೆಜ್ಜೆ ಇಡುತ್ತಿದೆ. ನವಜಾತ ಶಿಶುಗಳ ಮರಣಗಳನ್ನು ಕಡಿಮೆ ಮಾಡಲು ಕೈಗೊಂಡ ಉಪಕ್ರಮಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.
- ಕರ್ನಾಟಕ ರಾಜ್ಯದಲ್ಲಿ ಕಳೆದ 3 ವರ್ಷಗಳ ಗರ್ಭಿಣಿಯರ & ಬಾಣಂತಿಯರ ವಿವರ ಕೆಳಕಂಡಂತಿದೆ.

ಕ್ರ.ಸಂ	ವರ್ಷ	ನೋಂದಾಯಿಸಿದ ಗರ್ಭಿಣಿಯರ ಸಂಖ್ಯೆ (ಆರ್.ಸಿ.ಹೆಚ್ ತಂತ್ರಾಂಶ)	ದಾಖಲಿಸಿರುವ ಬಾಣಂತಿಯರ ಸಂಖ್ಯೆ (ಆರ್.ಸಿ.ಹೆಚ್ ತಂತ್ರಾಂಶ)
1	2023-24	1075691	839115
2	2024-25	1048937	857124
3	2025-26 ಅಕ್ಟೋಬರ್ ತಿಂಗಳ ಅಂತ್ಯಕ್ಕೆ	598383	466273

- ತಾಯಿ ಮರಣಗಳನ್ನು ತಡೆಗಟ್ಟಲು ಸರ್ಕಾರ ತಗೆದುಗೊಂಡಿರುವ ಕ್ರಮಗಳ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.
- ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆಯನ್ನು ನಿವಾರಿಸಲು, ಕಡಿಮೆ ಕಾರ್ಯ ಕ್ಷಮತೆಯುಳ್ಳ ಸಮುದಾಯ ಆರೋಗ್ಯ ಕೇಂದ್ರಗಳಿಂದ ತಾಲ್ಲೂಕು ಆಸ್ಪತ್ರೆಗಳು ಹಾಗೂ ಉತ್ತಮ ಕಾರ್ಯಕ್ಷಮತೆಯುಳ್ಳ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಪುನರ್ ಸ್ಥಳಾಂತರಿಸುವ ಉದ್ದೇಶದಿಂದ ಸರ್ಕಾರದ ಆದೇಶವನ್ನು ಇತ್ತೀಚೆಗೆ ಹೊರಡಿಸಲಾಗಿದ್ದು, ಅದು ಅನುಷ್ಠಾನದ ಹಂತದಲ್ಲಿದೆ.

- ಆಧುನಿಕ ಚಿಕಿತ್ಸಾ ಸೌಲಭ್ಯಗಳ ಕೊರತೆಯನ್ನು ನಿವಾರಿಸಲು ಕೆಳಕಂಡ ಆಧುನಿಕ ಔಷಧಿಗಳು ಮತ್ತು ಉಪಕರಣಗಳನ್ನು ಸರಬರಾಜು ಮಾಡಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

- ತೀವ್ರ ರಕ್ತಹೀನತೆಯನ್ನು ತಡೆಗಟ್ಟಲು ಆಧುನಿಕ ಔಷಧಿಯಾದ ಇಂಜೆಕ್ಷನ್ ಫೆರಿಕ್ ಕಾರ್ಬಾಕ್ಸಿ ಮಾಲ್ಟೋಸ್ (FCM) ಕೆ.ಎಸ್.ಎಂ.ಎಸ್.ಸಿ.ಎಲ್. ಸಂಸ್ಥೆಯ ಮೂಲಕ ಖರೀದಿಸಿ ಈಗಾಗಲೇ ಸರಬರಾಜು ಮಾಡಲಾಗಿರುತ್ತದೆ.

- ಪ್ರಸವಾನಂತರದ ಅಧಿಕ ರಕ್ತಸ್ರಾವವನ್ನು ತಡೆಗಟ್ಟಲು ಕಾರ್ಬೆಟೋಸಿನ್ (Carbetocine) ಚುಚ್ಚು ಮದ್ದಿನ ಖರೀದಿ ಪ್ರಕ್ರಿಯೆ ಜಾರಿಯಲ್ಲಿದೆ.

- Uterine Balloon Tamponade, Suction Cannula, NAS Garments ಹಾಗೂ Semi-automated Coagulation Analyser ಸೇರಿದಂತೆ ಆಧುನಿಕ ಉಪಕರಣಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿದೆ.

- ಎಲ್ಲಾ ತಾಲ್ಲೂಕು ಆಸ್ಪತ್ರೆಗಳ ರಕ್ತ ಶೇಖರಣೆ ಘಟಕಗಳಲ್ಲಿ ಅತ್ಯಂತ ಅವಶ್ಯಕವಾಗಿರುವ Cryoprecipitate ಮತ್ತು Fresh Frozen Plasma ಸಂಗ್ರಹಣೆಗೆ ಅಗತ್ಯವಾದ ಆಧುನಿಕ ಉಪಕರಣಗಳ ಖರೀದಿ ಹಾಗೂ ಸರಬರಾಜು ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

- ಆಧುನಿಕ ತಂತ್ರಜ್ಞಾನದ ಕರ್ನಾಟಕ-ಅಡ್ವಾನ್ಸ್ ರಿಯಲ್ ಟೈಮ್ ಮತ್ತು ಕಾಂಪ್ರಹೆನ್ಸಿವ್ ಪಾರ್ಟೋಗ್ರಫಿ (ಕೆ-ಎಆರ್‌ಸಿ ಪಾರ್ಟೋಗ್ರಫಿ) ಯನ್ನು ಬಳಸಲಾಗುತ್ತಿದ್ದು ಏಕ ಕಾಲದಲ್ಲಿ ರಾಜ್ಯಾದ್ಯಾಂತ ಸಂಭವಿಸುವ ಹೆರಿಗೆಗಳ ರಿಯಲ್ ಟೈಮ್ ಮಾಹಿತಿಯನ್ನು ಪಡೆದು ಅಗತ್ಯ ಮಾರ್ಗದರ್ಶನ ನೀಡುವ ವ್ಯವಸ್ಥೆಯಿದೆ. ಸದರಿ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

- ಪ್ರಸವ ಪೂರ್ವ ತಪಾಸಣೆಗೆ ಉಪಯುಕ್ತ ANC Wheel ಗಳನ್ನು ಎಲ್ಲಾ ಉಪ ಕೇಂದ್ರ, ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರಬರಾಜು ಮಾಡಲಾಗಿರುತ್ತದೆ ಮತ್ತು ಜೆಸ್ಟೋಸಿಸ್ ಸ್ಕೋರ್ (Gestosis Score) ಒಳಗೊಂಡ ಆಧುನಿಕ ವಿಧಾನವನ್ನು ತಾಯಿ ಕಾರ್ಡ್‌ನಲ್ಲಿ ಸೇರಿಸಲಾಗಿದ್ದು, ಇದು ಗುಣಮಟ್ಟದ ಗರ್ಭಿಣಿ ಆರೈಕೆಗೆ ನೆರವಾಗುತ್ತಿದೆ.

- ಅಧಿಕ ರಕ್ತದೊತ್ತಡವನ್ನು ತಡೆಯಲು Aspirin ಬಳಸಲಾಗುತ್ತಿದ್ದು, ಅದೇ ರೀತಿ ಸ್ಥೂಲಕಾಯ ಮಹಿಳೆಯರಿಗೆ ಪ್ರಸವದ ನಂತರ Heparin ಚುಚ್ಚು ಮದ್ದನ್ನು ಬಳಸಲಾಗುತ್ತಿದೆ.

- **ಟೆಲಿ ಮನಸ್ (Tele MANAS - Tele Mental Health Assistance and Networking Across States)** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಮುಖ ಉಪಕ್ರಮವಾಗಿದ್ದು, ಇದನ್ನು ಅಕ್ಟೋಬರ್ 10, 2022 ರಿಂದ ಪ್ರಾರಂಭಿಸಲಾಯಿತು, ಇದು ಟೋಲ್-ಫ್ರೀ ಸಂಖ್ಯೆಯಾದ 14416 ಮೂಲಕ ರಾಜ್ಯದಾದ್ಯಂತ ಜನರಿಗೆ ಉಚಿತ, ಗೌಪ್ಯ, 24 x 7 ನಿರಂತರವಾಗಿ ಮಾನಸಿಕ-ಆರೋಗ್ಯ ಬೆಂಬಲವನ್ನು ನೀಡುತ್ತಿದೆ. ಟೆಲಿ ಮನಸ್ ಕರ್ನಾಟಕದಲ್ಲಿ NIMHANS ಮತ್ತು DIMHANS ನಲ್ಲಿರುವ ಎರಡು ಟೆಲಿ ಮನಸ್ ಕೋಶಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ. ಕರೆ ಮಾಡಿದ ವ್ಯಕ್ತಿಗಳು ಮನೋವೈದ್ಯರಿಂದ ಮಾನಸಿಕ ಆರೋಗ್ಯ ಬೆಂಬಲವನ್ನು ಪಡೆಯಲು ಮತ್ತು ತಮ್ಮ ಮನೆಗಳಲ್ಲಿಯೇ ಕುಳಿತು ಇ-ಪ್ರಿಸ್ಕ್ರಿಪ್ಷನ್‌ಗಳನ್ನು ಉಚಿತವಾಗಿ ಪಡೆಯಲು ಅನುವು ಮಾಡಿಕೊಡುತ್ತದೆ.

- ಇದರ ರಚನಾತ್ಮಕ ಸೇವಾ ಮಾದರಿ, ಬಹುಭಾಷಾ ಬೆಂಬಲ ಮತ್ತು ವೀಡಿಯೋ ಸಮಾಲೋಚನೆಗಳು ಚಿಕಿತ್ಸಾ ಅಂತರವನ್ನು (Treatment Gap)ಕಡಿಮೆ ಮಾಡಲು ಸಹಾಯವಾಗಿದೆ. ಇದು ಕರ್ನಾಟಕದ ಮಾನಸಿಕ ಆರೋಗ್ಯ ಆರೈಕೆ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಮತ್ತು ಹೆಚ್ಚು ಸ್ಥಿತಿಸ್ಥಾಪಕ ಜನಸಂಖ್ಯೆಯನ್ನು ಬೆಂಬಲಿಸುವಲ್ಲಿ ಸಹಾಯವಾಗಿದೆ.

- ಟೆಲಿ ಮನಸ್ ಗೆ ಸಾಲದ ಹೊರೆ, ಶಿಕ್ಷಣ ಹೊರೆ ಸಂಬಂಧಿತ, ಕೌಟುಂಬಿಕ ಕಲಹ, ನಿದ್ರೆ ಸಮಸ್ಯೆ, ಖಿನ್ನತೆ, ಒತ್ತಡಗಳು, ಮದ್ಯ ವ್ಯಸನ, ಆತಂಕ ಇತ್ಯಾದಿ ರೀತಿಯ ಮಾನಸಿಕ ಹಾಗೂ ವೈದ್ಯಕೀಯ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಸಾವಿರಾರು ಕರೆಗಳು ಸ್ವೀಕೃತವಾಗಿವೆ. ದಿನಾಂಕ: 25.11.2025ರವರೆಗೂ ಸ್ವೀಕೃತವಾದ ಒಟ್ಟು ಕರೆಗಳ ಸಂಖ್ಯೆ:1,76,798 ವಿವರವನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ.

ಸಂಖ್ಯೆ:ಆಕುಕ 102 ಎಸ್.ಟಿ.ಕ್ಯೂ 2025

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ-1

ನವಜಾತ ಶಿಶುಗಳ ಮರಣಗಳನ್ನು ಕಡಿಮೆ ಮಾಡಲು ಕೈಗೊಂಡ ಉಪಕ್ರಮಗಳು

ನವಜಾತ ಶಿಶುಗಳ ಮರಣಗಳನ್ನು ಕಡಿಮೆ ಮಾಡಲು ಮತ್ತು ಆರೋಗ್ಯ ವೃದ್ಧಿಸಲು ರಾಜ್ಯದಲ್ಲಿ ವೈದ್ಯಕೀಯ ಸೇವೆಗಳಿಗಾಗಿ ಬಹುಹಂತದ ಸೌಲಭ್ಯ ಹಾಗೂ ವಿವಿಧ ಆರೋಗ್ಯ ಕಾರ್ಯಕ್ರಮಗಳು ಜಾರಿಯಲ್ಲಿದ್ದು ವಿವರಗಳನ್ನು ಕೆಳಕಂಡಂತಿವೆ.

ಆರೋಗ್ಯ ಸೇವೆಗಳು:

A. ಸೌಲಭ್ಯ ಆಧಾರಿತ ಸೇವೆಗಳು
- ನವಜಾತ ಶಿಶು ಆರೈಕೆ ಕಾರ್ನರ್ (NBCC)
- ನವಜಾತ ಶಿಶು ಸ್ಥಿರೀಕರಣ ಘಟಕ (NBSU)
- ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU)
- ತಾಯಿಯ ಎದೆಹಾಲಿನ ಸಮಗ್ರ ನಿರ್ವಹಣಾ ಕೇಂದ್ರಗಳು (CLMC)

B. ಸಮುದಾಯ ಆಧಾರಿತ ಸೇವೆಗಳು
- ಗೃಹ ಆಧಾರಿತ ನವಜಾತ ಶಿಶು ಆರೈಕೆ (HBNC).
- ಗೃಹ ಆಧಾರಿತ ಚಿಕ್ಕ ಮಕ್ಕಳ ಆರೈಕೆ (HBYC).

C. ಸಮುದಾಯ ಜಾಗೃತಿ ಕಾರ್ಯಕ್ರಮಗಳು
- ತೀವ್ರವಾದ ಅತಿಸಾರ ನಿಯಂತ್ರಣ ಪಾಕ್ಷಿಕ (IDCF).
- ನ್ಯುಮೋನಿಯಾವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಮ (SAANS).
- ರಾಷ್ಟ್ರೀಯ ನವಜಾತ ಶಿಶು ಸಪ್ತಾಹ (NNW).
- ವಿಶ್ವ ಸ್ತನ್ಯಪಾನ ಸಪ್ತಾಹ (WBW).

D. ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ವರ್ಧನೆ ತರಬೇತಿಗಳು
- ತಾಯಿಯ ಸಂಪೂರ್ಣ ವಾತ್ಸಲ್ಯ ಹಾಗೂ ಶಿಶು ಮತ್ತು ಚಿಕ್ಕ ಮಕ್ಕಳ ಪೋಷಣೆ (MAA-IYCF).
- ಸೌಲಭ್ಯ ಆಧಾರಿತ ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (F-IMNCI).
- ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (IMNCI).
- ಸೌಲಭ್ಯ ಆಧಾರಿತ ನವಜಾತ ಶಿಶು ಆರೈಕೆ (FBNC).
- ಚಿಕ್ಕ ಮಗುವಿಗೆ ಮನೆ ಆಧಾರಿತ ಆರೈಕೆ (HBYC)
- ನವಜಾತ ಸ್ಥಿರೀಕರಣ ಘಟಕ (NBSU)
- ನವಜಾತ ಶಿಶು ಸುರಕ್ಷಾ ಕಾರ್ಯಕ್ರಮ (NSSK)

E. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಆರ್ಥಿಕ ನೆರವು
- ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK) ಉಚಿತ ಔಷಧಗಳು ಮತ್ತು ಪ್ರಯೋಗಾಲಯದ ಪರೀಕ್ಷೆಗಳು
- ಜನನಿ ಶಿಶು ಸುರಕ್ಷಾ ಕಾರ್ಯಕ್ರಮ ಉಚಿತ ಸಾರಿಗೆ ರೆಫರಲ್ ಸೇವೆ

ಸೌಲಭ್ಯ ಆಧಾರಿತ ಸೇವೆಗಳು:

1. **ನವಜಾತ ಶಿಶುವಿನ ಆರೈಕೆ ಕಾರ್ನರ್ (NBCC): 1ನೇ ಹಂತದ ಆರೈಕೆ** ಹೆರಿಗೆಗಳನ್ನು ನಿರ್ವಹಿಸುತ್ತಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಮಟ್ಟದ ಆಸ್ಪತ್ರೆಗಳುಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳ ಆರೈಕೆಗಾಗಿ ನವಜಾತ ಶಿಶು ಆರೈಕೆ ಕೇಂದ್ರಗಳು (NBCC) ಕಾರ್ಯನಿರ್ವಹಿಸುತ್ತಿವೆ. ಹೆರಿಗೆ ಕೊಠಡಿಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಗುವನ್ನು ಬೆಚ್ಚಗಿಡಲು ರೇಡಿಯಂಟ್ ವಾರ್ಮರ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಪ್ರಸವ ಸಮಯದಲ್ಲಿ ಉಸಿರುಗಟ್ಟುವಿಕೆಯಾದಲ್ಲಿ ಚಿಕಿತ್ಸೆ ನೀಡಲು ಅಗತ್ಯ ಉಪಕರಣ ಹಾಗೂ ಆಕ್ಸಿಜನ್ ಸೌಲಭ್ಯವನ್ನು ನೀಡಲಾಗಿರುತ್ತದೆ. ಈ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಿತ್ತಿರುವ ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕರುಗಳಿಗೆ ನವಜಾತ ಶಿಶು

ಸುರಕ್ಷಾ ಕಾರ್ಯಕ್ರಮದಡಿ ತರಬೇತಿಯನ್ನು ನೀಡುವುದರ ಮೂಲಕ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದರ ಮೂಲಕ ಉತ್ತಮ ಸೇವೆಯನ್ನು ಒದಗಿಸಲಾಗುತಿದೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಏಪ್ರಿಲ್ 2025 ರಿಂದ ಅಕ್ಟೋಬರ್- 2025 ರವರೆಗೆ 2,61,032 ಜೀವಂತ ಜನನಗಳಿಗೆ ಅವಶ್ಯಕ ಸೇವೆ ನೀಡಲಾಗಿರುತ್ತದೆ (ವರದಿ: HMIS).

2. **ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU): 2ನೇ ಹಂತದ ಆರೈಕೆ**

ರಾಜ್ಯದಲ್ಲಿ ಪ್ರಸ್ತುತ 224 ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU) ಕಾರ್ಯನಿರ್ವಹಿಸುತ್ತಿವೆ. ನವಜಾತ ಶಿಶು ಸ್ಥಿರೀಕರಣ ಘಟಕಗಳನ್ನು ಸಮುದಾಯ ಆರೋಗ್ಯ ಕೇಂದ್ರ/ಎಫ್.ಆರ್.ಯು ಹಾಗೂ ತಾಲ್ಲೂಕ ಮಟ್ಟದ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಘಟಕಗಳಲ್ಲಿ ಜನನ ಸಮಯದಲ್ಲಿ ತೊಂದರೆಗೊಳಾಗುವ ನವಜಾತ ಶಿಶುಗಳಿಗೆ ಅಗತ್ಯ ತುರ್ತು ಚಿಕಿತ್ಸೆ ನೀಡಲಾಗುವುದು. ಇದಲ್ಲದೇ ನವಜಾತ ಶಿಶುವಿನಲ್ಲಿ ಕಂಡುಬರುವ ಜಾಂಡೀಸ್ ಕಾಯಿಲೆಗೆ ಅಗತ್ಯವಿರುವ ಫೋಟೋಥೆರಪಿ ಚಿಕಿತ್ಸೆಯನ್ನು ನೀಡಲು ಉಪಕರಣಗಳನ್ನು ಒದಗಿಸಲಾಗಿದೆ ಹಾಗೂ ನವಜಾತ ಶಿಶುಗಳಲ್ಲಿ/ ಮಕ್ಕಳಲ್ಲಿ ಕಂಡುಬರುವ ಅತಿಸಾರ ಬೇದಿ ಇತ್ಯಾದಿ ತೊಂದರೆಗಳಿಗೂ ಸಹ ಚಿಕಿತ್ಸೆಯನ್ನು ನೀಡಲಾಗುವುದು. ನವಜಾತ ಶಿಶು ಸ್ಥಿರೀಕರಣ ಘಟಕಗಳಲ್ಲಿ ಇಬ್ಬರು ತರಬೇತಿ ಹೊಂದಿದ ಶುಶ್ರೂಷಕರುಗಳನ್ನು ನಿಯೋಜಿಸಿದ್ದು, ನವಜಾತ ಶಿಶುಗಳ ಆರೋಗ್ಯವನ್ನು ಪುನಶ್ಚೇತನಗೊಳಿಸಲಾಗುತ್ತಿದೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಏಪ್ರಿಲ್ 2025 ರಿಂದ ಅಕ್ಟೋಬರ್- 2025 ರವರೆಗೆ ಒಟ್ಟು 17,356 ನವಜಾತ ಶಿಶುಗಳಿಗೆ ನವಜಾತ ಶಿಶು ಸ್ಥಿರೀಕರಣ ಘಟಕಗಳು ಮೂಲಕ ಸೇವೆ ನೀಡಲಾಗಿದ್ದು, ಶೇ.87.97 ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿರುತ್ತಾರೆ.

3. **ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU): 3ನೇ ಹಂತದ ಆರೈಕೆ**

ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಮತ್ತು ಆಯ್ದು ಹೆಚ್ಚಿನ ಹೆರಿಗೆಗಳಾಗುವ ತಾಲ್ಲೂಕು ಆಸ್ಪತ್ರೆಗಳಲ್ಲಿ ಒಟ್ಟು 50 SNCUಗಳು ಸ್ಥಾಪಿಸಲಾಗಿದೆ. 24×7 ಸೇವೆಗಳನ್ನು ಒದಗಿಸಲು ತರಬೇತಿ ಪಡೆದ ಮಕ್ಕಳ ತಜ್ಞರು, ವೈದ್ಯರು, ಶುಶ್ರೂಷಕರು ಮತ್ತು ಸಹಾಯಕ ಸಿಬ್ಬಂದಿಯಿಂದ SNCUಗಳನ್ನು ನಿರ್ವಹಿಸಲಾಗುತ್ತಿದೆ. ನವಜಾತ ಶಿಶುವಿಗೆ ಬೆಂಬಲ ಆರೈಕೆಯನ್ನು ಬಲಪಡಿಸಲು ಕಾಂಗರೂ ಮದರ್ ಕೇರ್ (KMC) ward ಗಳು ಮತ್ತು ಹಾಲುಣಿಸುವ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ. ಕಡಿಮೆ ಜನನ ತೂಕದ ಶಿಶುಗಳ ಬದುಕುಳಿಯುವಿಕೆಯನ್ನು ಹೆಚ್ಚಿಸಲು ಆರಂಭಿಕ ಸ್ತನ್ಯಪಾನ ಮತ್ತು ಸಂಪೂರ್ಣ ಸ್ತನ್ಯಪಾನದ (exclusive breastfeeding) ಮಹತ್ವವನ್ನು ಹಾಗೂ ಪೋಷಕರಿಗೆ ಕಾಂಗರೂ ಮಾದರಿ ಆರೈಕೆಯನ್ನು ನೀಡಲು ಉತ್ತೇಜಿಸಲಾಗುತ್ತಿದೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ 50 SNCUಗಳಲ್ಲಿ ಒಟ್ಟು 1138 ಹಾಸಿಗೆಗಳಿದ್ದು, ಏಪ್ರಿಲ್ 2025 ರಿಂದ ಅಕ್ಟೋಬರ್- 2025 ರವರೆಗೆ 46520 ನವಜಾತ ಶಿಶುಗಳಿಗೆ ಸೇವೆ ನೀಡಲಾಗಿದ್ದು, ಶೇ. 87.20% ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿ ಬಿಡುಗಡೆ ಹೊಂದಿರುತ್ತಾರೆ.

4. **ತಾಯಿಯ ಎದೆಹಾಲಿನ ಸಮಗ್ರ ನಿರ್ವಹಣಾ ಕೇಂದ್ರಗಳು (CLMC):**

ಸಮಗ್ರ ಹಾಲುಣಿಸುವಿಕೆ ನಿರ್ವಹಣಾ ಕೇಂದ್ರ (CLMC) ಆಸ್ಪತ್ರೆಯೊಳಗಿನ ಎಲ್ಲಾ ತಾಯಂದಿರಿಗೆ ಸಮಗ್ರ ಹಾಲುಣಿಸುವ ಬೆಂಬಲ ಮತ್ತು ನಿರ್ವಹಣೆಯನ್ನು ಒದಗಿಸುವ ಉದ್ದೇಶಕ್ಕಾಗಿ ರಾಜ್ಯದಲ್ಲಿ 12 ಸರ್ಕಾರಿ ಆಸ್ಪತ್ರೆಗಳಲ್ಲಿ CLMC ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತವಾಗಿ, ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆ, ಘೋಷಾ ಆಸ್ಪತ್ರೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ; ಲೇಡಿ ಗೋಶೆನ್ ಆಸ್ಪತ್ರೆ, ದಕ್ಷಿಣ ಕನ್ನಡ; ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹಾಸನ; ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ, ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆ, ಶಿವಮೊಗ್ಗ; ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ, ಕಲಬುರ್ಗಿ; ಎಸ್. ಎನ್. ಆರ್. ಜಿಲ್ಲಾ ಆಸ್ಪತ್ರೆ, ಕೋಲಾರ; ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ; ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ; ಜಿಲ್ಲಾ ಆಸ್ಪತ್ರೆ, ವಿಜಯಪುರ ಇಲ್ಲಿ ಸ್ಥಾಪಿಸಲಾಗಿದ್ದು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. 2025–26 ನೇ ಸಾಲಿನಲ್ಲಿ ಏಪ್ರಿಲ್ ತಿಂಗಳಿನಿಂದ ದಿನಾಂಕ 24.11.2025ರವರೆಗೆ, ಒಟ್ಟು 3801 ನವಜಾತ ಶಿಶುಗಳು ತಾಯಿ ಹಾಲು ಬ್ಯಾಂಕ್‌ಗಳ ಸೇವೆಯಿಂದ ಪ್ರಯೋಜನ ಪಡೆದಿದ್ದಾರೆ.

ಸಮುದಾಯ ಆಧಾರಿತ ಸೇವೆಗಳು:

- **ಗೃಹ ಆಧಾರಿತ ನವಜಾತ ಶಿಶು ಆರೈಕೆ (HBNC):** ಆಶಾ ಕಾರ್ಯಕರ್ತೆಯರು ಹೆರಿಗೆಯ ನಂತರದ ಮೊದಲ 42 ದಿನಗಳಲ್ಲಿ 6-7 ಬಾರಿ ನವಜಾತ ಶಿಶುವಿನ ಮನೆಗಳಿಗೆ ಭೇಟಿ ನೀಡುತ್ತಾರೆ. 37800 ಆಶಾ ಕಾರ್ಯಕರ್ತೆಯರಿಗೆ ಸಾಮಾನ್ಯ ನವಜಾತ ಶಿಶು ಕಾಯಿಲೆಗಳನ್ನು ಗುರುತಿಸಲು ಮತ್ತು ಸ್ತನ್ಯಪಾನ ಮತ್ತು ನವಜಾತ ಶಿಶುವಿನ ಆರೈಕೆಯ ಬಗ್ಗೆ ತಾಯಂದಿರಿಗೆ ಶಿಕ್ಷಣ ನೀಡಲು ತರಬೇತಿ ನೀಡಲಾಗಿದೆ. ನವಜಾತ ಶಿಶುವಿನ ಆರೈಕೆಯನ್ನು ಖಚಿತಪಡಿಸಿಕೊಳ್ಳಲು ಅವರಿಗೆ ಅಗತ್ಯ ಉಪಕರಣಗಳು ಮತ್ತು ಔಷಧಿಗಳನ್ನು ಒಳಗೊಂಡಿರುವ ಕಿಟ್ ಅನ್ನು ಒದಗಿಸಲಾಗಿದೆ.
- **ಗೃಹ ಆಧಾರಿತ ಚಿಕ್ಕ ಮಕ್ಕಳ ಆರೈಕೆ (HBYC):** ಈ ಕಾರ್ಯಕ್ರಮದ ಅಡಿಯಲ್ಲಿ ಆಶಾ ಕಾರ್ಯಕರ್ತೆಯರು 3, 6, 9, 12 ಮತ್ತು 15ನೇ ತಿಂಗಳಲ್ಲಿ ಐದು ಮನೆ ಭೇಟಿಗಳನ್ನು ನೀಡಿ, ಮಕ್ಕಳ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸುತ್ತಾರೆ. ಆರೈಕೆಯ ವೇಳೆ ಯಾವುದೇ ನ್ಯೂನತೆ ಕಂಡುಬಂದಲ್ಲಿ, ಆ ಮಗುವನ್ನು ತಕ್ಷಣ ಹೆಚ್ಚಿನ ಚಿಕಿತ್ಸೆಗಾಗಿ ಆರೋಗ್ಯ ಸಂಸ್ಥೆಗೆ ರವಾನಿಸಿ ದಾಖಲಿಸುವ ವ್ಯವಸ್ಥೆ ಜಾರಿಗೆ ಇದೆ. ರಾಜ್ಯಾದ್ಯಂತ ಒಟ್ಟು 33,252 ಆಶಾ ಕಾರ್ಯಕರ್ತೆಯರು HBYC ಅಡಿಯಲ್ಲಿ ತರಬೇತಿ ಪಡೆದಿದ್ದು, ರಾಜ್ಯಾದ್ಯಂತ ಕಾರ್ಯಕ್ರಮವು ಅನುಷ್ಠಾನವಾಗಿದೆ.

ಸಮುದಾಯ ಜಾಗೃತಿ ಕಾರ್ಯಕ್ರಮಗಳು:

- **ಅತಿಸಾರ ತಡೆಗಟ್ಟುವ ಅಭಿಯಾನ (STOP Diarrhoea Campaign):** ಮಕ್ಕಳ ಮರಣಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾದ ಅತಿಸಾರ ನಿರ್ವಹಣೆಯ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸಲು ಅತಿಸಾರ ತಡೆಗಟ್ಟುವ ಅಭಿಯಾನವನ್ನು ಆಚರಿಸಲಾಗುತ್ತಿದೆ. ಸದರಿ ಅಭಿಯಾನದ ಸಂದರ್ಭದಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತರು ಮತ್ತು ಪ್ರಾಥಮಿಕ ಆರೋಗ್ಯ ಶುಶ್ರೂಷಕರು ಗಳಂತಹ ಎಲ್ಲಾ ಮೊಂಚೂಣಿ ಕಾರ್ಯಕರ್ತರು ORS ಪೊಟ್ಟಣಗಳು ಮತ್ತು Zinc Sulphate ಮಾತ್ರೆಗಳ ಸಕ್ರಿಯ ಬಳಸುವಿಕೆ ಮತ್ತು ವಿತರಣೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ಆರೋಗ್ಯ ಕಾರ್ಯಕರ್ತರು 5 ವರ್ಷದೊಳಗಿನ ಮಕ್ಕಳ ಮನೆಗಳಿಗೆ ಭೇಟಿ ನೀಡುತ್ತಾರೆ ಮತ್ತು ORS ದ್ರಾವಣ ತಯಾರಿಕೆ, ಮನೆಯಲ್ಲಿ ಅತಿಸಾರ ನಿರ್ವಹಣೆ, ನೈರ್ಮಲ್ಯತೆ, ಕೈ ತೊಳೆಯುವ ತಂತ್ರಗಳ ಬಗ್ಗೆ ಪೋಷಕರಿಗೆ ಜಾಗೃತಿ ಮೂಡಿಸುತ್ತಾರೆ.

- **ನ್ಯುಮೋನಿಯಾವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಮ (SAANS):** ಶ್ವಾಸಕೋಶದ ಸೋಂಕು/ನ್ಯುಮೋನಿಯಾವು ಮಕ್ಕಳ ಮರಣಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಈ ಅಭಿಯಾನದಡಿ; ಕಡಿಮೆ ಜನನದ ತೂಕ, ಅಪೌಷ್ಟಿಕತೆ, ಒಳಾಂಗಣ ವಾಯುಮಾಲಿನ್ಯ, ರೋಗ ನಿರೋಧಕ ಶಕ್ತಿಯ ಕೊರತೆ, ನೈರ್ಮಲ್ಯದ ಕೊರತೆ ಮತ್ತು ಇತರ ಅನೇಕ ಸಾಮಾಜಿಕ-ಆರ್ಥಿಕ ಅಂಶಗಳಂತಹ ಅಪಾಯಕಾರಿ ಅಂಶಗಳ ಸಂಯೋಜನೆಯಿಂದ ಉಂಟಾಗುವ ಬಾಲ್ಯದ ನ್ಯುಮೋನಿಯಾ ಗುರುತಿಸುವಿಕೆ, ನಿರ್ವಹಣೆ ಮತ್ತು ಸೂಕ್ತ ರೆಫರಲ್ ಸೇವೆಗಳ ಬಗ್ಗೆ ಜಾಗೃತಿ ಮೂಡಿಸಲು ನವೆಂಬರ್ 12 ರಿಂದ ಫೆಬ್ರುವರಿ 28 ರವರೆಗೆ SAANS ಅಭಿಯಾನವನ್ನು ನಡೆಸಲಾಗುತ್ತದೆ. ಆಶಾ ಕಾರ್ಯಕರ್ತರು ಮತ್ತು ಕ್ಷೇತ್ರ ಮಟ್ಟದ ಆರೋಗ್ಯ ಕಾರ್ಯಕರ್ತರು ಮನೆಗಳಿಗೆ ಭೇಟಿ ನೀಡಿ ಜಾಗೃತಿ ಚಟುವಟಿಕೆಗಳನ್ನು ನಡೆಸುತ್ತಾರೆ.

- **ರಾಷ್ಟ್ರೀಯ ನವಜಾತ ಶಿಶು ಸಪ್ತಾಹ:** ನವಜಾತ ಶಿಶು ಸಪ್ತಾಹವನ್ನುಪ್ರತಿ ವರ್ಷ ನವೆಂಬರ್ ಎರಡನೇ ವಾರದಲ್ಲಿ ಆಚರಿಸಲಾಗುತ್ತದೆ. ಇದು ನವಜಾತ ಶಿಶುಗಳ ಆರೈಕೆಗೆ ಪ್ರಾಮುಖ್ಯತೆಯನ್ನು ನೀಡಲು ಮತ್ತು ನವಜಾತ ಶಿಶುಗಳ ಆರೈಕೆ ಮತ್ತು ಸ್ತನ್ಯಪಾನವನ್ನು ಸುಧಾರಿಸುವ ಮಹತ್ವವನ್ನು ಒತ್ತಿಹೇಳುವ ಕಾರ್ಯಕ್ರಮವಾಗಿದೆ.

- **ವಿಶ್ವ ಸ್ತನ್ಯಪಾನ ಸಪ್ತಾಹ:** ಪ್ರತಿ ವರ್ಷ ಆಗಸ್ಟ್ ಮೊದಲ ವಾರದಲ್ಲಿ ರಾಜ್ಯದಾದ್ಯಂತ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಆಚರಿಸಲಾಗುತ್ತದೆ. ಸ್ತನ್ಯಪಾನದ ಪ್ರಾಮುಖ್ಯತೆ, ಸ್ತನ್ಯಪಾನದಲ್ಲಿ ಪೋಷಕರ ಸಕ್ರಿಯ ಪಾತ್ರ, ಹಾಗೂ ತಾಯಿಯ ಹಾಲಿನ ಮಹತ್ವವು ಮಕ್ಕಳ ಆರೋಗ್ಯಕರ ಭವಿಷ್ಯದ ಹೂಡಿಕೆಯಾಗಿರುವುದನ್ನು ಒತ್ತಿಹೇಳುವುದು ಈ ಸಪ್ತಾಹದ ಆಚರಣೆಯ ಮುಖ್ಯ ಉದ್ದೇಶವಾಗಿದೆ.

ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ವರ್ಧನೆ:

- ಸೌಲಭ್ಯ ಆಧಾರಿತ ನವಜಾತ ಶಿಶು ಆರೈಕೆ (FBNC) ಕುರಿತಾಗಿ ಶುಶ್ರೂಷಕರಿಗೆ ತರಬೇತಿ ನೀಡಲು ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಲಾಗಿದೆ. ಏಪ್ರಿಲ್ 2025 ರಿಂದ ಅಕ್ಟೋಬರ್- 2025 ರವರೆಗೆ ಒಟ್ಟು 216 ಶುಶ್ರೂಷಕರಿಗೆ ತರಬೇತಿ ನೀಡಲಾಗಿದೆ.
- ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (IMNCI), ಸೌಲಭ್ಯ ಆಧಾರಿತ ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (F-IMNCI), ನವಜಾತ ಶಿಶು ಸುರಕ್ಷಾ ಕಾರ್ಯಕ್ರಮ (NSSK), ತಾಯಿಯ ಸಂಪೂರ್ಣ ವಾತ್ಸಲ್ಯ ಹಾಗೂ ಶಿಶು ಮತ್ತು ಚಿಕ್ಕ ಮಕ್ಕಳ ಪೋಷಣೆ (MAA-IYCF) ತರಬೇತಿಗಳನ್ನು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ತರಬೇತಿ ನೀಡಲಾಗಿದೆ.

ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಆರ್ಥಿಕ ನೆರವು ಯೋಜನೆಗಳು: ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK): ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK) ಡ್ರಗ್ಸ್ ಮತ್ತು ಡಯಾಗ್ನೋಸ್ಟಿಕ್ಸ್ ಮತ್ತು ಉಚಿತ ರೆಫರಲ್ ಸೇವೆ ಅನಾರೋಗ್ಯ ಪೀಡಿತ ಶಿಶುಗಳ ಚಿಕಿತ್ಸೆಗಾಗಿ ಪೋಷಕರಿಂದ ಖರ್ಚು ಮಾಡುವುದನ್ನು ಕಡಿಮೆ ಮಾಡಲು JSSK ಕಾರ್ಯಕ್ರಮದಡಿ ಆರೋಗ್ಯ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನ ನೀಡುವ ಕಾರ್ಯಕ್ರಮವು ಅನುಷ್ಠಾನದಲ್ಲಿದೆ.

ಉಪ ನಿರ್ದೇಶಕರು-ಮಕ್ಕಳ ಆರೋಗ್ಯ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು

ಅನುಬಂಧ-2

ತಾಯಿ ಮರಣಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳು:

1. ಮೊದಲ ತ್ರೈಮಾಸಿಕ ಸೇರಿದಂತೆ ಎಲ್ಲಾ ಗರ್ಭಿಣಿ ಬೇಟಿಯಲ್ಲಿ ಹೆಚ್ಚಿನ ಅಪಾಯಕಾರಿ ಅಂಶಗಳಿಗಾಗಿ ಪರೀಕ್ಷಿಸುವ ಮೂಲಕ ಪ್ರಸವಪೂರ್ವ ಆರೈಕೆಯ ಗುಣಮಟ್ಟವನ್ನು ಸುಧಾರಿಸುವುದು.
2. ಗರ್ಭಿಣಿ ಮತ್ತು ಸಹಾಯಕರಿಂದ ಪ್ರಸ್ತುತ ಮತ್ತು ಹಿಂದಿನ ಪ್ರಸೂತಿ, ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸಾ ವಿವರಗಳನ್ನು ಕೂಲಂಕುಷವಾಗಿ ಪಡೆಯುವುದು.
3. ತಾಯಿ ಕಾರ್ಡ್, ಹೊರರೋಗಿ ದಸ್ತಾವೇಜು ಮತ್ತು RCH ಪೋರ್ಟಲ್‌ನಲ್ಲಿ ಗರ್ಭಿಣಿ ಆರೈಕೆ ಬಗ್ಗೆ ವಿವರಗಳನ್ನು ನಮೂದಿಸುವುದು.
4. ಮಾರ್ಗಸೂಚಿಗಳ ಅನ್ವಯ ಪ್ರಸವ ಪೂರ್ವ ಮತ್ತು ಪ್ರಸವ ನಂತರ ಅವಧಿಗೆ IFA ಮತ್ತು ಕ್ಯಾಲ್ಸಿಯಂ ಮಾತ್ರೆಗಳನ್ನು ಒದಗಿಸುವುದು.
5. ರಕ್ತಹೀನತೆ, ರಕ್ತದೊತ್ತಡ ಮತ್ತು ರಕ್ತದಲ್ಲಿನ ಗ್ಲೂಕೋಸ್‌ನ ಪತ್ತೆಹಚ್ಚುವಿಕೆಗೆ ಒತ್ತು ನೀಡಬೇಕಾಗಿದೆ.
6. ಗರ್ಭಾವಸ್ಥೆಯಲ್ಲಿ ಎಚ್‌ಐವಿ, ಕ್ಷಯ, ಹೆಪಟೈಟಿಸ್, ಸಿಫಿಲಿಸ್ ಮತ್ತು ಲಕ್ಷಣರಹಿತ ಬ್ಯಾಕ್ಟೀರಿಯೂರಿಯಾದಂತಹ ಸೋಂಕುಗಳ ಪತ್ತೆಹಚ್ಚುವುದು.
7. ವೈದ್ಯಕೀಯ ಕಾಲೇಜು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿನ ಹೊರರೋಗ ವಿಭಾಗದಲ್ಲಿ ಒದಗಿಸುತ್ತಿರುವ ಪ್ರಸವ ಪೂರ್ವಸೇವೆಗಳನ್ನು ಹಿರಿಯ ಆರೋಗ್ಯ ಅಧಿಕಾರಿಗಳು/ಹಿರಿಯ ಪ್ರಸೂತಿ ತಜ್ಞರು ಮೇಲ್ವಿಚಾರಣೆ ಮಾಡುವುದು.
8. ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಅಂದರೆ ತಾಲೂಕು, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಾಧ್ಯಮಿಕ ಮತ್ತು ತೀವ್ರತರ ರಕ್ತಹೀನತೆಯನ್ನು ಸರಿಪಡಿಸುವಲ್ಲಿ ಮಾರ್ಗಸೂಚಿಗಳ ಪ್ರಕಾರ ಐರನ್ ಸುಕ್ರೋಸ್/ಎಫ್‌ಸಿಎಂ ಚುಚ್ಚುಮದ್ದನ್ನು ನೀಡುವುದು
9. ಪ್ರಸವಪೂರ್ವ ತಾಯಿಯ ಪ್ರಮುಖ ಅಂಶದಲ್ಲಿ ಏರುಪೇರಾದಾಗ ಅಂತಹ ಅಂಶಗಳನ್ನು ಜಿಲ್ಲಾ ಆಸ್ಪತ್ರೆ ಅಥವಾ ಸರ್ಕಾರಿ ವೈದ್ಯಕೀಯ ಆಸ್ಪತ್ರೆಯ ತಜ್ಞರೊಡನೆ ಚರ್ಚಿಸಿ ಚಿಕಿತ್ಸೆಯನ್ನು ನೀಡುವುದು
10. ಪ್ರತಿ ಗರ್ಭಿಣಿಯನ್ನು 2 ನೇ ತಿಂಗಳಿನಿಂದ 7 ನೇ ತಿಂಗಳವರೆಗೆ ತಿಂಗಳಿಗೊಮ್ಮೆ ಪ್ರಸವ ಪೂರ್ವ ಆರೈಕೆಗಾಗಿ ಸಮಾಲೋಚಿಸಿ ಅನುಸರಣೆ ಮಾಡುವುದು, 8 ನೇ ತಿಂಗಳ ಅವಧಿಯಲ್ಲಿ ಎರಡು ಬಾರಿ ಮತ್ತು 9 ನೇ ತಿಂಗಳಲ್ಲಿ ವಾರಕ್ಕೊಮ್ಮೆ ಭೇಟಿ ನೀಡಬೇಕು. ಗರ್ಭಿಣಿಯರ ಆರೋಗ್ಯಕರ ಸ್ಥಿತಿಯನ್ನು ಖಚಿತಪಡಿಸಿಕೊಳ್ಳುವುದು. ಇದಲ್ಲದೆ, ಎಲ್ಲಾ ಗಂಡಾಂತರ ಗರ್ಭಿಣಿಯರನ್ನ 8 ನೇ ಮತ್ತು 9 ನೇ ತಿಂಗಳಲ್ಲಿ ದೂರವಾಣಿ ಮೂಲಕ ಸಂಪರ್ಕಿಸಬೇಕು
11. ಎಲ್ಲಾ ಗರ್ಭಿಣಿ ಮಹಿಳೆಯರಿಗೆ ಹೆರಿಗೆಯ ಸಮಯ, ಸ್ಥಳ ಮತ್ತು ಹೆರಿಗೆ ವಿಧಾನಕ್ಕೆ ಸಂಬಂಧಿಸಿದಂತೆ ಹೆರಿಗೆ ಯೋಜನೆಯನ್ನು ಮಾಡಬೇಕು. 108 ಅಥವಾ ಸ್ಥಳೀಯ ಸಾರಿಗೆಯ ಮೂಲಕ ಸಾರಿಗೆ ವ್ಯವಸ್ಥೆಗಳನ್ನು ಮಾಡುವುದು. ಹೆರಿಗೆ ಯೋಜನೆಯನ್ನು ಪ್ರಾಥಮಿಕ/ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯು ಹತ್ತಿರದ CHC, ತಾಲೂಕು/ಜಿಲ್ಲಾ FRU ನಲ್ಲಿ ಪ್ರಸೂತಿ ತಜ್ಞರೊಂದಿಗೆ ಸಮಾಲೋಚಿಸಿ ನಿರ್ಧರಿಸುವುದು.
12. ಹೆರಿಗೆಗೆ ತಾಯಿಯನ್ನು ಸ್ವೀಕರಿಸುವಲ್ಲಿ ಸಿದ್ಧತೆ, ಅಗತ್ಯ ಔಷಧಗಳು ಮತ್ತು ಉಪಭೋಗ್ಯ ವಸ್ತುಗಳು, ಸಕ್ಷನ್ ಮೆಷಿನ್, ತುಂಬಿದ ಆಮ್ಲಜನಕ ಸಿಲಿಂಡರ್‌ಗಳು, ರೇಡಿಯಂಟ್ ವಾರ್ಮರ್, ವ್ಯಾಕ್ಯೂಮ್/ಫೋರ್ಸ್‌ಪ್ಸ್, ಹೆರಿಗೆ ಕೊಠಡಿ ಮತ್ತು ಆಪರೇಷನ್ ಥಿಯೇಟರ್‌ನಲ್ಲಿ ಸಂಸ್ಕರಿಸಿದ ಇನ್ಸುಟ್ರುಮೆಂಟ್ಸ್, ಆಟೋಕ್ಲೇವ್‌ಗಳ ಸಿದ್ಧತೆಯನ್ನು ಆಡಳಿತ ವೈದ್ಯಾಧಿಕಾರಿ ಖಚಿತಪಡಿಸಿಕೊಳ್ಳಬೇಕು.
13. ಇಂಡಕ್ಷನ್ ಆಫ್ ಲೇಬರ್ ಕುರಿತಾಗಿ ಸರ್ಕಾರ ಹೊರಡಿಸಿದ ಮಾರ್ಗಸೂಚಿಗಳ ಪಾಲನೆ.
14. ಸೇವಾ ಪೂರೈಕೆದಾರರು ಮತ್ತು ತಾಯಿ/ಕುಟುಂಬದವರ ಅನುಕೂಲಕ್ಕೆ ತಕ್ಕಂತೆ ಅನಗತ್ಯ ಸಿಸೇರಿಯನ್ ನೆರವೇರಿಸಬಾರದು.
15. ಸಹಜ ಹೆರಿಗೆಯಾದ 3 ದಿವಸಗಳವರೆಗು ಮತ್ತು ಸಿಸೇರಿಯನ್ ಅಪರೇಷನ್ ನಂತರ 7 ದಿವಸಗಳ ವರೆಗೂ ಕಡ್ಡಾಯವಾಗಿ ಆಸ್ಪತ್ರೆಯಲ್ಲಿ ದಾಖಲಿಸಬೇಕು
16. ತಾಯಿ ಮತ್ತು ನವಜಾತ ಶಿಶುವಿನ ಯೋಗಕ್ಷೇಮವನ್ನು ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಆರೋಗ್ಯ ಆರೈಕೆ ತಂಡದಿಂದ ಮನೆ ಭೇಟಿಗಳನ್ನು ಮಾಡುವುದು.
17. ತಾಲ್ಲೂಕು ಮಟ್ಟದ ರಕ್ತ ಸಂಗ್ರಹಣಾ ಘಟಕಗಳು ರಕ್ತ ಮತ್ತು ರಕ್ತ ಉತ್ಪನ್ನಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಲು ಎಲ್ಲಾ ಮೂಲಸೌಕರ್ಯಗಳನ್ನು ಹೊಂದಿರಬೇಕು.
18. ಎಲ್ಲಾ ಪ್ರಸೂತಿ ತಜ್ಞರಿಗೆ ಹೆಚ್ಚಿನ ರಕ್ತ ನೀಡುವಿಕೆಬಗ್ಗೆ ತರಬೇತಿ.
19. ಎಲ್ಲಾ ಗರ್ಭಿಣಿಯರಲ್ಲಿ ಅಧಿಕ ರಕ್ತದೊತ್ತಡವನ್ನು ಪತ್ತೆ ಹಚ್ಚಲು ಜೆಸ್ಟೋಸಿಸ್ ಸ್ಕೋರ್ ಅನುಷ್ಠಾನ. ಈ ರೋಗದಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಡೆಯಲು ಆಸ್ಪಿರಿನ್ 75 ಮಿಗ್ರಾಂ ಮಾತ್ರೆಗಳನ್ನು ಬಳಸುವುದು

20. ಗುಣಮಟ್ಟದ ಗರ್ಭಿಣಿ ಆರೈಕೆಗೆ ಅಗತ್ಯವಾದ ಉಪಕರಣಗಳಾದ **BP** ಉಪಕರಣ, ತೂಕದ ಯಂತ್ರ, ರೇಡಿಯಂಟ್ ವಾರ್ಮರ್, ಗ್ಲುಕೋಮೀಟರ್ ಮತ್ತು ಹಿಮೋಗ್ಲೋಬಿನೋಮೀಟರ್‌ಗಳನ್ನು ಆಗಿಂದ್ದಾಗೆ ಕ್ಯಾಲಿಬಿರೇಷನ್ ಮಾಡಿಸುವುದು
21. ಆರೋಗ್ಯ ಸಂಸ್ಥೆಗಳಿಂದ ಬಿಡುಗಡೆ ಸಮಯದಲ್ಲಿ ಅನುಸರಿಸಬೇಕಾದ ಔಷಧಿಗಳ ಬಗ್ಗೆ ಸಮಾಲೋಚನೆ ಮತ್ತು ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ಸಕಾಲಿಕ ಅನುಸರಣಾ ಭೇಟಿಗಳು.
22. ಆರೋಗ್ಯ ಸಂಸ್ಥೆಗಳಿಂದ ಬಿಡುಗಡೆ ಬಗ್ಗೆ ಮಾಹಿತಿ ಮತ್ತು ಅನುಸರಿಸಬೇಕಾದ ಸಲಹೆಗಳನ್ನು ಹತ್ತಿರದ ಆರೋಗ್ಯ ಕೇಂದ್ರಗಳು ಮತ್ತು ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿಗಳಿಗೆ ತಿಳಿಸುವುದು.
23. ಗರ್ಭಾವಸ್ಥೆಯ ಅಧಿಕ ರಕ್ತದ ಒತ್ತಡದ ರೋಗಕ್ಕೆ ಚಿಕಿತ್ಸೆ ನೀಡಲು ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸುವುದು.
24. ಸ್ಥೂಲಕಾಯ ಗರ್ಭಿಣಿ/ಬಾಣಂತಿಯರಿಗೆ ಹೆಪಾರಿನ್ ರೋಗನಿರೋಧಕ ಚುಚ್ಚುಮದ್ದನ್ನು ನೀಡುವುದು.
25. ಖಾಸಗಿ ವೈದ್ಯರಿಗೆ ತಾಯಂದಿರ ಮರಣದ ಬಗ್ಗೆ ಮತ್ತು ಗುಣಮಟ್ಟದ ಚಿಕಿತ್ಸೆಬಗ್ಗೆ ಅರಿವು ಮೂಡಿಸುವುದು. 140/90 ಕ್ಕಿಂತ ಹೆಚ್ಚಿನ ರಕ್ತದೊತ್ತಡ ಹೊಂದಿರುವ ಗರ್ಭಿಣಿ ಮಹಿಳೆಯರನ್ನು ವಿಶ್ಲೇಷಿಸಲು ಕಡ್ಡಾಯವಾಗಿ ಒಳರೋಗಿಯಾಗಿ ದಾಖಲಿಸುವುದು.
26. ತಾಯಿಯ ಸಾವಿಗೆ ಯಾವುದೇ ನಿರ್ದಿಷ್ಟ ಕಾರಣವಿಲ್ಲದ ಎಲ್ಲಾ ಸನ್ನಿವೇಶಗಳಿಗೆ ಮರಣೋತ್ತರ ಪರೀಕ್ಷೆಯನ್ನು ಕಡ್ಡಾಯಗೊಳಿಸುವುದು.
27. ಪೊಲೀಸ್ ಇಲಾಖೆ ಮತ್ತು ವಿಧಿವಿಜ್ಞಾನ ಪ್ರಯೋಗಾಲಯಗಳ ಸಿಬ್ಬಂದಿಗಳಿಗೆ ಮರಣೋತ್ತರ ಪರೀಕ್ಷಾ ವರದಿಯನ್ನು ಬೇಗನೆ ಸಲ್ಲಿಸುವ ಬಗ್ಗೆ ಮನವರಿಕೆ ಮಾಡುವುದು.

ಗರ್ಭಾವಸ್ಥೆಯ ಮತ್ತು ಬಾಣಂತನದಲ್ಲಿ ಅಪೌಷ್ಠಿಕತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಸರ್ಕಾರವು ಕೈಗೊಂಡಿದೆ.

1. ಅಪೌಷ್ಠಿಕತೆಯಿಂದ ಬಳಲುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ದಿನಕ್ಕೆ 2 ಬಾರಿಯಂತೆ ಒಟ್ಟು 6 ತಿಂಗಳಿಗೆ 360 ಕಬ್ಬಿಣಾಂಶ ಮಾತ್ರೆಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದೆ. ರಕ್ತದ ಹೀಮೋಗ್ಲೋಬಿನ್ ಹೆಚ್ಚಿಸಲು ಈ ಮಾತ್ರೆಗಳನ್ನು ಸಮುದಾಯ ಆರೋಗ್ಯಾಧಿಕಾರಿಗಳು (CHOs), ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಆಶಾ ಕಾರ್ಯಕರ್ತೆಯರು ಮತ್ತು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ವಿತರಿಸಲಾಗುತ್ತಿದೆ
2. ಗರ್ಭಾವಸ್ಥೆಯಲ್ಲಿ ಅಪೌಷ್ಠಿಕತೆಯನ್ನು ತಡೆಗಟ್ಟಲು 4 ನೇ ತಿಂಗಳಿನಲ್ಲಿ ಆಲ್‌ಬೆಂಡೋಜೋಲ್ ಮಾತ್ರೆಯನ್ನು ಎಲ್ಲಾ ವರ್ಗದ ಗರ್ಭಿಣಿಯರಿಗೆ ನೀಡಲಾಗುತ್ತಿದೆ ಮತ್ತು ಇದರ ಸೇವನೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಈ ಮಾತ್ರೆಯಿಂದ ತಾಯಿಯ ಹೊಟ್ಟೆಯಲ್ಲಿರುವ ರಕ್ತವನ್ನು ಹೀರುವ ಜಂತು ಹುಳುಗಳನ್ನು ನಾಶಪಡಿಸಲಾಗುತ್ತದೆ ಮತ್ತು ಆಹಾರದಲ್ಲಿನ ಪೌಷ್ಠಕತೆಯನ್ನು ಗರ್ಭಿಣಿಯ ದೇಹವು ಹೀರಿಕೊಳ್ಳಲು ಅನುವು ಮಾಡಿಕೊಡುತ್ತದೆ.
3. ಕರ್ನಾಟಕ ರಾಜ್ಯದಲ್ಲಿ ಗರ್ಭಾವಸ್ಥೆಯಲ್ಲಿ ಅಪೌಷ್ಠಿಕತೆಯನ್ನು ತಡೆಗಟ್ಟಲು iron sucrose ಚುಚ್ಚುಮದ್ದನ್ನು ತೀವ್ರತರ ರಕ್ತ ಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಬಾಣಂತಿಯರಿಗೆ ಅಲ್ಲದೆ Hb % 10 ಗ್ರಾಂ ಗಿಂತ ಕಡಿಮೆ ಇರುವ ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರಿಗೂ ನೀಡಲಾಗುತ್ತಿದೆ.
4. ಅಧಿಕ ರಕ್ತಸ್ರಾವವನ್ನು ತಡೆಗಟ್ಟಲು ಪ್ರಸವ ನಂತರ ಕಾರ್ಬಿಟೋಸಿನ್ ಚುಚ್ಚು ಮದ್ದನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
5. ಗರ್ಭಾವಸ್ಥೆಯಲ್ಲಿ ರಕ್ತ ಹೀನತೆಯನ್ನು ತಡೆಗಟ್ಟಲು Ferric Carboxy Maltose (FCM) ಚುಚ್ಚುಮದ್ದನ್ನು ಎಲ್ಲಾ ಜಿಲ್ಲಾ ಮಟ್ಟ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಬಳಸಲಾಗುತ್ತಿದೆ.
6. ತೀವ್ರತರ ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ಸರ್ಕಾರಿ ಆಸ್ಪತ್ರೆಗಲ್ಲಿ ಉಚಿತವಾಗಿ JSSK ಕಾರ್ಯಕ್ರಮದಡಿಯಲ್ಲಿ Blood Transfusion ವ್ಯವಸ್ಥೆ ಮಾಡಲಾಗಿದೆ.
7. ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕತೆಯ ಬಗ್ಗೆ ಮನೆಯಲ್ಲಿ ಸೇವಿಸಬೇಕಾದ ಆಹಾರದ ಬಗ್ಗೆ ಆಪ್ತ ಸಮಾಲೋಚನೆಯನ್ನು(Nutritional Counselling) ಎಲ್ಲಾ ಹಂತದ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುತ್ತಿದೆ. ಇದರಿಂದ ಪೌಷ್ಠಿಕಾಂಶದ ಆಹಾರದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಉಪ ನಿರ್ದೇಶಕರು
(ತಾಯಿ ಆರೋಗ್ಯ)
ಆಕುಕ ಸೇವೆಗಳು ಬೆಂಗಳೂರು

ಅನುಬಂಧ-3

ಟೆಲಿ ಮನಸ್ (Tele MANAS - Tele Mental Health Assistance and Networking Across States) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಮುಖ ಉಪಕ್ರಮವಾಗಿದ್ದು, ಇದನ್ನು ಅಕ್ಟೋಬರ್ 10, 2022 ರಿಂದ ಪ್ರಾರಂಭಿಸಲಾಯಿತು, ಇದು ಟೋಲ್-ಫ್ರೀ ಸಂಖ್ಯೆಯಾದ 14416 ಮೂಲಕ ರಾಜ್ಯದಾದ್ಯಂತ ಜನರಿಗೆ ಉಚಿತ, ಗೌಪ್ಯ, 24×7 ಮಾನಸಿಕ-ಆರೋಗ್ಯ ಬೆಂಬಲವನ್ನು ನೀಡುತ್ತಿದೆ. ಟೆಲಿ ಮನಸ್ ಕರ್ನಾಟಕದಲ್ಲಿ NIMHANS ಮತ್ತು DIMHANS ನಲ್ಲಿರುವ ಎರಡು ಟೆಲಿ ಮನಸ್ ಕೋಶಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ. ಕರೆ ಮಾಡಿದ ವ್ಯಕ್ತಿಗಳು ಮನೋವೈದ್ಯರಿಂದ ಮಾನಸಿಕ ಆರೋಗ್ಯ ಬೆಂಬಲವನ್ನು ಪಡೆಯಲು ಮತ್ತು ತಮ್ಮ ಮನೆಗಳಲ್ಲಿಯೇ ಕುಳಿತು ಇ-ಪ್ರಿಸ್ಕ್ರಿಪ್ಷನ್‌ಗಳನ್ನು ಉಚಿತವಾಗಿ ಪಡೆಯಲು ಅನುವು ಮಾಡಿಕೊಡುತ್ತದೆ.

ಇದರ ರಚನಾತ್ಮಕ ಸೇವಾ ಮಾದರಿ, ಬಹುಭಾಷಾ ಬೆಂಬಲ ಮತ್ತು ವೀಡಿಯೋ ಸಮಾಲೋಚನೆಗಳು ಚಿಕಿತ್ಸಾ ಅಂತರವನ್ನು (Treatment Gap) ಕಡಿಮೆ ಮಾಡಲು ಸಹಾಯವಾಗಿದೆ. ಇದು ಕರ್ನಾಟಕದ ಮಾನಸಿಕ ಆರೋಗ್ಯ ಆರೈಕೆ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಮತ್ತು ಹೆಚ್ಚು ಸ್ಥಿತಿಸ್ಥಾಪಕ ಜನಸಂಖ್ಯೆಯನ್ನು ಬೆಂಬಲಿಸುವಲ್ಲಿ ಸಹಾಯವಾಗಿದೆ.

ಟೆಲಿ ಮನಸ್ ಕರೆಗಳು ವಯಸ್ಸಿನ ಪ್ರಕಾರ



ಟೆಲಿ ಮನಸ್ ಕರೆಗಳು ವರ್ಗವಾರು



ಟೆಲಿ ಮನಸ್ ಗೆ ಸಾಲದ ಹೊರೆ, ಶಿಕ್ಷಣ ಹೊರೆ ಸಂಬಂಧಿತ, ಕೌಟುಂಬಿಕ ಕಲಹ, ನಿದ್ರೆ ಸಮಸ್ಯೆ, ಖಿನ್ನತೆ, ಒತ್ತಡಗಳು, ಮದ್ಯವ್ಯಸನ, ಆತಂಕ ಇತ್ಯಾದಿ ರೀತಿಯ ಮಾನಸಿಕ ಹಾಗೂ ವೈದ್ಯಕೀಯ ಸಮಸ್ಯೆಗಳಿಗೆ ಸಂಬಂದಪಟ್ಟಂತೆ ಸಾವಿರಾರು ಕರೆಗಳು ಸ್ವೀಕೃತವಾಗಿವೆ. 25.11.2025 ರವರೆಗೂ ಸ್ವೀಕೃತವಾದ ಒಟ್ಟು ಕರೆಗಳ ಸಂಖ್ಯೆ -1,76,798.

Rajani P.

ಉಪ ನಿರ್ದೇಶಕರು
(ಮಾನಸಿಕ ಆರೋಗ್ಯ)
ಆಕುಕ ಸೇವೆಗಳು ಬೆಂಗಳೂರು